# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–1/ಡಿಇ–472/2017/ಎ.ಆರ್.ಇ–16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 30/12/2019.

## ವಿಚಾರಣಾ ವರದಿ

ಉಪಸ್ಥಿತರು: ಸೆಲ್ವಕುಮಾರ್.ಸಿ, ಅಪರ ನಿಬಂಧಕರು ವಿಚಾರಣೆಗಳು–16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: (1) ಶ್ರೀ ಆರ್.ಎಸ್.ಗಲಗಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್. ಬಾಗಲಕೋಟೆ ಮತ್ತು
(2) ಶ್ರೀ ಆರ್.ಜಿ.ಗಡ್ಡದ, ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್., ಬಾಗಲಕೋಟೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1. **ಕಂಪ್ಲೆಂಟ್/ಉಪಲೋಕ್/ಬಿಜಿಎಂ–1571/2016/ಅ.ನಿ.ವಿ–5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 12/01/2017.**
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:03:ಕಗ್ರಾಮೂ:2017, ಬೆಂಗಳೂರು, ದಿನಾಂಕ:10/02/2017.
3. ನಾಮನಿರ್ದೇಶನ ಸಂಖ್ಯೆ:ಉಪಲೋಕ್–1/ಡಿಇ–472/2017, ಬೆಂಗಳೂರು ದಿನಾಂಕ: 31.03.2017.
4. Note No.Uplok-1 & 2/DE/Transfers/ 2019, dated 07.02.2019.

* * * *

1) ಈ ದೂರನ್ನು, ದೂರುದಾರರಾದ, ಶ್ರೀ ಯಮನಪ್ಪ(ಮುತ್ತಪ್ಪ) ಕೋಣಪ್ಪ ಚಲವಾದಿ, ಬಾಗಲಕೋಟೆರವರು ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ **ಆರ್.ಎಸ್. ಗಲಗಲಿ,** ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್. ಬಾಗಲಕೋಟೆ ಮತ್ತು (2) ಶ್ರೀ **ಆರ್.ಜಿ.ಗಡ್ಡದ,** ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್., ಬಾಗಲಕೋಟೆ (ಇನ್ನು ಮುಂದೆ ಆ.ಸ.ನೌ ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 10/02/2017 ರಂದು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-1 ರವರು ದಿನಾಂಕ 31.03.2017 ರಂದು ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ ಮಾಡಿ ವರದಿಯನ್ನು, ಉಲ್ಲೇಖ (3) ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16 ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರುಗಳ ವಿರುದ್ಧ ದೋಷಾರೋಪಣೆ (Article of charges)ಅನ್ನು ಅಪರ ನಿಬಂಧಕರು, ವಿಚಾರಣೆಗಳು-11 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ 22/04/2017ರಂದು ಕಳುಹಿಸಲಾಗಿರುತ್ತದೆ.

## <u>ಅನುಬಂಧ-1</u>

4) ಒಂದನೆ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಸ್.ಗಲಗಲಿ ರವರು ಬಾಗಲಕೋಟೆಯ ಕೆ.ಆರ್.ಐ.ಡಿ.ಎಲ್.ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಮತ್ತು ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀಆರ್.ಜಿ.ಗಡ್ಡದರವರು ಬಾಗಲಕೋಟೆಯ ಕೆ.ಆರ್.ಐ.ಡಿ.ಎಲ್‌ನಲ್ಲಿ ಕಾರ್ಯನಿರ್ವಾಹಕ ಅಭಿಯಂತತರಾಗಿ 2014ನೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಬಾಗಲಕೋಟೆ ತಾಲ್ಲೂಕಿನ ಭಗವತಿ ಗ್ರಾಮದಲ್ಲಿ ಅನುಮೋದಿತ ಅಂದಾಜು ಪಟ್ಟಿಯಂತೆ ರೂ.57.22 ಲಕ್ಷಗಳ ಅನುದಾನದಲ್ಲಿ 35 ಕಾಮಗಾರಿಗಳು ಮಂಜೂರಾಗಿದ್ದು, ಸದರಿ 35 ಕಾಮಗಾರಿಗಳ ಪೈಕಿ 13

ಕಾಮಗಾರಿಯನ್ನು ನಿರ್ವಹಿಸದೇ, ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಮತ್ತು ಕಾಮಗಾರಿಗಳಿಗೆ ಮೀಸಲಿಟ್ಟ ಹನವನ್ನು ಅನುಮೋದನೆ ಪಡೆಯದೆ ಬೇರೆ ಕಾಮಗಾರಿಗಳಿಗೆ ಬಳಸಿರುವುದು ಮತ್ತು ಬದಲಿ ಕಾಮಗಾರಿ ನಿರ್ಮಾಣಕ್ಕೆ ಗ್ರಾಮ ಪಂಚಾಯತಿಯ ಅನುಮೋದನೆ ಪಡೆಯದೆ ಸದರಿ ಯೋಜನೆಗಳ ನಿಯಮಗಳನ್ನು ಉಲ್ಲಂಘಿಸುವುದರ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ.

## ಅನುಬಂಧ-2

## ದೋಷರೋಪಣೆಯ ವಿವರ

5) ದೂರುದಾರರಾದ ಶ್ರೀ ಯಮನಪ್ಪ ಕೋಣಪ್ಪ ಚಲವಾದಿ, ಭಗವತಿ ಗ್ರಾಮ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ರವರು ತಮ್ಮ ದೂರಿನಲ್ಲಿ, ಭಗವತಿ ಗ್ರಾಮಕ್ಕೆ 5ನೇ ಹಂತ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ರೂ.57,22,000/-ಗಳಲ್ಲಿ 35 ಕಾಮಗಾರಿಗಳನ್ನು ನಿರ್ವಹಿಸಲು ಅನುಮೋದನೆಯಾಗಿದ್ದರೂ ಕೇವಲ 13 ಕಾಮಗಾರಿಗಳನ್ನು ಮಾತ್ರ ನಿರ್ವಹಿಸಿರುವುದಾಗಿ ಆಪಾದಿಸಿರುತ್ತಾರೆ.

ಸದರಿ ಆಪಾದನೆಗಳಿಗೆ ಸಂಬಂಧಿಸಿದಂತೆ, ಆಪಾದಿತರಾದ ನಿಮಗೆ ಆಕ್ಷೇಪಣೆ ತಕರಾರು ಸಲ್ಲಿಸಲು ಸೂಚಿಸಿದ್ದು, ಆಕ್ಷೇಪಣೆ/ತಕರಾರು ಸಲ್ಲಿಸಿದ್ದು, ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ.

1) ಸಮುದಾಯ ಭವನ ನಿರ್ಮಾಣ ಮಾಡಲು ಸ್ಥಳ ಲಭ್ಯವಿಲ್ಲದ ಕಾರಣ ಸಿ.ಸಿ.ರಸ್ತೆ ಕಾಮಗಾರಿಯನ್ನು ನಿರ್ವಹಿಸಿರುವುದು.

2) ಅನುಮೋದಿತ 35 ಕಾಮಗಾರಿಗಳ ಪೈಕಿ 13 ಕಾಮಗಾರಿಗಳನ್ನು ನಿರ್ವಹಿಸದೇ ಇದ್ದರೂ ಸಹ ಹಣ ಬಿಡುಗಡೆ ಮಾಡಿರುವುದು.

3) 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು.

4) ಅನುಮೋದಿತ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಬೇರೆ ಕಾಮಗಾರಿಗಳಿಗೆ ಬಳಸಿಕೊಂಡಿರುವುದು

ದೂರಿನ ಪ್ರತಿಯನ್ನು ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ನೀವು ಸಲ್ಲಿಸಿರುವ ಆಕ್ಷೇಪಣೆಗಳನ್ನು ಒಪ್ಪಲು ಬಾರದಿರುವುದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದಾಗ ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1) (ii) ಮತ್ತು (iii)ರಡಿಯಲ್ಲಿ ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಎದುರುದಾರರ ವಿರುದ್ದ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ದ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ದ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ, ನಿಮ್ಮ ಮೇಲೆ **ಈ ದೋಷಾರೋಪಣೆ.**

6) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ–1ರವರು ದಿನಾಂಕ 26/05/2017ರಂದು ಮತ್ತು ಆ.ಸ.ನೌ–2ರವರು ದಿನಾಂಕ 20/07/2017ರಂದು ಹಾಜರಾಗಿದ್ದು, ಅವರುಗಳ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ.

7) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

8) ಆ.ಸ.ನೌ–1 ಮತ್ತು 2ರವರು ರಕ್ಷಣಾತ್ಮಕ ಹೇಳಿಕೆ ದಾಖಲಿಸಿಲ್ಲ ಎಂದು ದಿನಾಂಕ 23/09/2017ರಂದು ಆದೇಶಿಸಲಾಗಿರುತ್ತದೆ.

09) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ ಯಮನಪ್ಪ ಕೋನಪ್ಪ ಚಲವಾದಿರವರನ್ನು **ಪಿ.ಡಬ್ಲ್ಯು.1** ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ರಿಂದ ನಿ.ಪಿ–10 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

10) ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌ–1 ಮತ್ತು ಆ.ಸ.ನೌ–2ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ.

11) ಆ.ಸ.ನೌ–1ರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು.1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ–1 ಮತ್ತು ನಿಡಿ–09 ಎಂದು ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–2ರವರು ತಮ್ಮ ಪರವಾವಿ ತಾನು ಡಿ.ಡಬ್ಲ್ಯು–2 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ–10 ಎಂದು ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

12) ಉಭಯ ಪಕ್ಷಗಾರರ ಪರವಾಗಿ ವಾದವಿವಾದವನ್ನು ಆಲಿಸಲಾಯಿತು.

13) **ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.**

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

14) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

**15)** **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ ಯಮನಪ್ಪ ಕೋನಪ್ಪ ಚಲವಾದಿರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, **ನಿ.ಪಿ–1 ರಿಂದ ನಿ.ಪಿ–10ರವರೆಗಿನ** ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದಾಖಲೆಯು ಪ್ರಪತ್ರ–1 ನಿಪಿ–2 ಪ್ರಪತ್ರ–2 ದಾಖಲೆಯು ನಿಪಿ–3 ದೂರು ಇರುತ್ತದೆ. ನಿಪಿ–4 ದಾಖಲೆಯು, ದೂರುದಾರರು ದಿನಾಂಕ 25/05/2015ರಂದು ಕಾರ್ಯನಿರ್ವಾಹಕ ಅಭಿಯಂತರರು (ಕೆ.ಆರ್.ಐ.ಡಿ.ಎಲ್) ನವನಗರ, ಬಾಗಲಕೋಟೆರವರಿಗೆ ನೀಡಿದ ಅರ್ಜಿಯ ಪ್ರತಿ, ನಿಪಿ–5 ದಾಖಲೆಯು, ಅ.ಸ.ನೌ–1ರವರು ದಿನಾಂಕ 04/06/2015ರಂದು ದೂರುದಾರರಿಗೆ ಬರೆದ ಪತ್ರದ ಪ್ರತಿ, ನಿಪಿ–6 (7 ಹಾಳೆಗಳು) ದಾಖಲೆಯು 3ನೇ ವ್ಯಕ್ತಿಯ ತಪಾಸಣಾ ವರದಿ, ನಿಪಿ–7 (2 ಹಾಳೆಗಳು) ದಾಖಲೆಯು 3ನೇ ತಪಾಸಣಾ ವ್ಯಕ್ತಿಯ ಮತ್ತೊಂದು ವರದಿ, ನಿಪಿ–8 (39 ಹಾಳೆಗಳು) ಅಂದಾಜು ಪಟ್ಟಿಯ ಜೆರಾಕ್ಸ್ ಪ್ರತಿ, ನಿಪಿ–9 (24 ಹಾಳೆಗಳು) ದಾಖಲೆಯು ಮತ್ತೊಂದು ಅಂದಾಜು ಪಟ್ಟಿಯ ಜೆರಾಕ್ಸ್ ಪ್ರತಿ ಮತ್ತು ನಿಪಿ–10 ಕಾಮಗಾರಿ ಅನುದಾನದ ವಿವರದ ಪ್ರತಿ ಇರುತ್ತದೆ.

16) ಶಿಸ್ತು ಪ್ರಾಧಿಕಾರವು ಈ ಆ.ಸ.ನೌರವರುಗಳ ಮೇಲೆ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲು ದೂರುದಾರರಾದ ಶ್ರೀ ಯಮನಪ್ಪ ಕೋನಪ್ಪ ಚಲವಾದಿ ಎಂಬುವರನ್ನು ಸಾಕ್ಷಿ ನುಡಿಸಿಕೊಂಡಿದ್ದು, ಇವರು ನಿಪಿ-1 ರಿಂದ ನಿಪಿ-3 ದೂರು ಮತ್ತು ಪ್ರಪತ್ರ-1 ಮತ್ತು ಪ್ರಪತ್ರ-2ನ್ನು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುವ ಬಗ್ಗೆ ನುಡಿದಿರುತ್ತಾರೆ. ಮುಂದುವರೆದು, ಈ ಕೆಳಕಂಡಂತೆ ನುಡಿದಿರುತ್ತಾರೆ.

"In the year 2014 civil works are executed in Bhagawathi Village under Suvarna Gramodaya Yozane at the estimate of Rs.57,22,000/-. In all thirty two Civil Works are covered under the said scheme.

As per the measurement book and concerned records a sum of Rs.49,19,128/- is shown towards expenditure.

Only nineteen Civil works are executed. Remaining thirteen civil works are not executed. I have obtained copy of measurement book and copy of third party inspection report in which it is mentioned that in all thirty two civil works are executed".

"DGOs 1 and 2 have not executed thirteen works and are responsible for misappropriation of funds allotted to those unexecuted civil works".

ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ, 2014ನೇ ಸಾಲಿನಲ್ಲಿ, ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಭಗವತಿ ಗ್ರಾಮದಲ್ಲಿ 32 ಕಾಮಗಾರಿಗಳನ್ನು ಗುರುತಿಸಿದ್ದು, ಆ ಬಗ್ಗೆ ರೂ.49,19,128/-ಗಳು ಖರ್ಚು ಮಾಡಿರುವುದಾಗಿ ಅಳತೆ ಪುಸ್ತಕ ಮತ್ತು ಸಂಬಂಧಪಟ್ಟ

ದಾಖಲೆಗಳಲ್ಲಿ ತೋರಿಸಿರುವುದಾಗಿ ಆದರೆ, 32 ಕಾಮಗಾರಿಗಳ ಪೈಕಿ 19 ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಿರುವುದಾಗಿ ಬಾಕಿ 13 ಕಾಮಗಾರಿಗಳನ್ನು ನಿರ್ವಹಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಈ ರೀತಿ ಸಂಪೂರ್ಣ 32 ಕಾಮಗಾರಿಗಳನ್ನು ನಿರ್ವಹಿಸದೇ ಇದ್ದಾಗಿಯೂ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿರುವುದಾಗಿ ಈ ಆ.ಸ.ನೌ–1 ಮತ್ತು ಆ.ಸ.ನೌ–2ರವರು ದಾಖಲೆಗಳನ್ನು ಸೃಷ್ಟಿಸಿರುವುದಾಗಿ ಹಾಗೂ ಈ ಹಣದ ಅವ್ಯವಹಾರವನ್ನು ಈ ಆ.ಸ.ನೌರವರುಗಳು ಮಾಡಿರುವುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಈ ದೂರುದಾರರನ್ನು ಆ.ಸ.ನೌ ಪರ ವಕೀಲರು ಸವಿಸ್ತಾರವಾದ ಪಾಟೀ ಸವಾಲು ವಿಚಾರಣೆ ಮಾಡಿದ್ದಾಗಿಯೂ ಯಾವುದೇ ವ್ಯತಿರಿಕ್ತವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅಲ್ಲದೇ, ನಿಪಿ–6ರಲ್ಲಿ ತಿಳಿ ಹಳದಿ ಬಣ್ಣದಲ್ಲಿ ಅಂದರೆ ಪುಟ 4 ಮತ್ತು 5ರಲ್ಲಿ ತೋರಿಸಿರುವ ಹಳದಿ ಬಣ್ಣದಲ್ಲಿ ನಮೂದಿಸಿರುವ ಕಾಮಗಾರಿಗಳು ಆಗಿರುವುದಿಲ್ಲವೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ.

17) ಆ.ಸ.ನೌ–1 ಮತ್ತು ಆ.ಸ.ನೌ–2ರವರು ತಮ್ಮ ಪರವಾದ ರಕ್ಷಣಾ ಹೇಳಿಕೆ ದಾಖಲಿಸಿರುವುದಿಲ್ಲ. ಈ ಪ್ರಕರಣದ ದೂರು ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ–1571/2016/ಎ.ಆರ್.ಇ–5ರಲ್ಲಿಯೂ ಈ ಆ.ಸ.ನೌ.ರವರುಗಳು ಯಾವುದೇ ಆಕ್ಷೇಪಣೆ ಸಲ್ಲಿಸಿದ್ದು, ಆದರೆ, ಸದರಿ ಆಕ್ಷೇಪಣೆಯಲ್ಲಿ ವಿವಾದಿತ 13 ಕಾಮಗಾರಿಗಳ ಆಪಾದನೆಯ ಬಗ್ಗೆ ನಿಖರವಾದ ಸಮಜಾಯಿಷಿ ನೀಡಿರುವುದಿಲ್ಲವೆಂಬುದು ಕಲಂ 12(3) ವರದಿಯಲ್ಲಿ ಕಾಣಿಸಿರುವುದು ಕಡತದಿಂದ ಕಂಡು ಬರುತ್ತದೆ. ಆ.ಸ.ನೌರವರುಗಳು ಆರೋಪದಲ್ಲಿ ಮತ್ತು ನಿಪಿ–6, ಪುಟ ಸಂಖ್ಯೆ 4 ಮತ್ತು 5ರಲ್ಲಿ ಕಾಣಿಸಿದ ಕ್ರ.ಸಂಖ್ಯೆ:1 ರಿಂದ 4, 14–15, 17–21, 27–30 ಮತ್ತು 32 ಒಟ್ಟು ಈ 13 ಕಾಮಗಾರಿಗಳನ್ನು ನಿರ್ವಹಿಸಿರುವುದಿಲ್ಲವೆಂಬುದು ಗುರುತರ ಆರೋಪವಾಗಿರುತ್ತದೆ.

18) 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಬಾಗಲಕೋಟೆ ತಾಲ್ಲೂಕಿನ ಭಗವತಿ ಗ್ರಾಮದಲ್ಲಿ ಅನುಮೋದಿತ ಅಂದಾಜು ಪಟ್ಟಿಯಂತೆ ರೂ. 57.22 ಲಕ್ಷಗಳ ಅನುದಾನದಲ್ಲಿ 35 ಕಾಮಗಾರಿಗಳು ಮಂಜೂರಾಗಿದ್ದು, ಸದರಿ 35 ಕಾಮಗಾರಿಗಳ ಪೈಕಿ 13 ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ, ನಿ. ಪಿ–9 ಎಂ.ಬಿ. ಪುಸ್ತಕ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ

ಕಾಮಗಾರಿಗಳಿಗೆ ಒಟ್ಟು 49,19,128/- ಖರ್ಚು ಮಾಡಿದ್ದು ಕಂಡು ಬಂದಿದ್ದು, ಹಾಗೂ 13 ಕಾಮಗಾರಿಗಳನ್ನು ಮಾಡದಿರುವುದು **ನಿ.ಪಿ-6** 3ನೇ ವ್ಯಕ್ತಿಯ ಅಭಿಪ್ರಾಯ ವರದಿ (3rd Party Inspection Report) ಯಿಂದ ಸ್ಪಷ್ಟವಾಗಿರುತ್ತದೆ ಹಾಗೂ ಈ ರೀತಿ ಸಂಪೂರ್ಣ 32 ಕಾಮಗಾರಿಗಳನ್ನು ಸಹ ನಿರ್ವಹಿಸದೇ ಇದ್ದಾಗಿಯೂ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿರುವುದಾಗಿ ಆ.ಸ.ನೌ-1 ಮತ್ತು ಆ.ಸ.ನೌ-2ರವರು ದಾಖಲೆಗಳನ್ನು ಸೃಷ್ಟಿಸಿ ಹಾಗೂ ಈ ಹಣದ ಅವ್ಯವಹಾರವನ್ನು ಈ ಆ.ಸ.ನೌರವರುಗಳು ಮಾಡಿರುವುದಾಗಿ ಫಿರ್ಯಾದುದಾರರು ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಇನ್ನು ಸಮುದಾಯ ಭವನ ನಿರ್ಮಾಣ ಮಾಡಲು ಸ್ಥಳ ಲಭ್ಯವಿಲ್ಲದ ಕಾರಣ ಸಿ.ಸಿ.ರಸ್ತೆ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಆಪಾದಿತ ಸರ್ಕಾರಿ ನೌಕರರ ಪರ ವಕೀಲರು ಸಲ್ಲಿಸಿರುವ ನಿ. ಡಿ-4 ನ್ನು ಪರಿಶೀಲಿಸಲಾಗಿ, ಸಂಬಂಧಪಟ್ಟ ಗ್ರಾಮಪಂಚಾಯತಿಯ ಸಭೆಯ ಸರ್ವಾನುಮತದಿಂದ ಅಂಗೀಕರಿಸಿರುವ ನಡಾವಳಿಯ ಧೃಡಿಕೃತ ಪ್ರತಿಯನ್ನು ಸಲ್ಲಿಸಬೇಕಾಗಿದ್ದು, ಆದರೆ, ಯಾವುದೇ ಸಭೆಯ ನಡಾವಳಿಯನ್ನು ಸಲ್ಲಿಸದೆ ಪ್ರೊಸಿಡಿಂಗ್ಸ್ ಬುಕ್ಕಿನ ದೃಢಿಕೃತ ಪ್ರತಿಯನ್ನು ಸಲ್ಲಿಸಿದ್ದು, ಸದರಿ ಪ್ರೊಸಿಡಿಂಗ್ಸ್‌ನಲ್ಲಿ ಭಗವತಿ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ ಅಡಿಯಲ್ಲಿ 100 ಮೀಟರ್ ಚರಂಡಿ ಅವಶ್ಯವಿದ್ದು, ಇನ್ನುಳಿದ ಕೆಲಸವನ್ನು ಸಿ.ಸಿ. ಕಾಂಕ್ರೀಟ್ ರಸ್ತೆ ಗ್ರಾಮದಲ್ಲಿ ಅವಶ್ಯಕತೆ ಇರುವುದರಿಂದ ಸದರಿ ಗ್ರಾಮದ ಸದಸ್ಯರ ಸಿ.ಸಿ. ರಸ್ತೆ ಮಾಡಿಸಲು ಸಭೆ ಸರ್ವಾನುಮತಿಯಿಂದ ಒಪ್ಪಿಗೆ ನೀಡಿತು ಎಂದು ನಮೂದಿಸಿದ್ದು, ಆದರೆ, ಸಭೆಯ ನಡಾವಳಿಯ ದೃಢಿಕೃತ ಪ್ರತಿಯನ್ನು ಸಲ್ಲಿಸದೆ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಭಗವತಿ ಗ್ರಾಮ ಪಂಚಾಯತ್ ಸಹಿ ಇರುವುದನ್ನು ಸಲ್ಲಿಸಿದ್ದು ಅದರಲ್ಲಿ ಬೇರೆ ಯಾವುದೇ ಸದಸ್ಯರ ಸಹಿಯಾಗಲೀ ಅಥವಾ ಸಭೆಯಲ್ಲಿ ಹಾಜರಿದ್ದವರ ಸಹಿ ಕಂಡು ಬಂದಿರುವುದಿಲ್ಲ ಹಾಗೂ ಸಮದಾಯ ಭವನ ನಿರ್ಮಾಣ ಮತ್ತು ಇತರೆ ಕಾಮಗಾರಿಗಳಿಗೆ ಮೀಸಲಿಟ್ಟ ಹಣವನ್ನು ಅನುಮೋದನೆ ಪಡೆಯದೆ ಬೇರೆ ಕಾಮಗಾರಿಗಳಿಗೆ ಬಳಸಿರುವುದು ಸುವರ್ಣ ಗ್ರಾಮೋದಯ ಯೋಜನೆ ಮಾರ್ಗಸೂಚಿಯನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ ಹಾಗೂ ಆ.ಸ.ನೌ-1 ಮತ್ತು 2 ರವರು ದಾಖಲೆಗಳನ್ನು ಸೃಷ್ಟಿಸಿ ಹಾಗೂ ಈ ಹಣದ ಅವ್ಯವಹಾರವನ್ನು ಈ ಆ.ಸ.ನೌರವರುಗಳು ಮಾಡಿರುವುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿ ಹಾಗೂ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದನ್ನು ಮತ್ತು ಅನುಮೋದಿತ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಬೇರೆ ಕಾಮಗಾರಿಗಳಿಗೆ ಬಳಸಿಕೊಂಡು ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರು ಕರ್ತವ್ಯಲೋಪವೆಸಗಿರುವುದು ಸಾಭೀತಾಗಿರುತ್ತದೆ.

19) ಆ.ಸ.ನೌ.–1 ಮತ್ತು 2 ರವರುಗಳು ಸಮರ್ಥಿಸಿಕೊಂಡಿರುವ ಸಮರ್ಥನೆಯು ಸರ್ಕಾರಿ ನೌಕರನಿಗೆ ತಕ್ಕುದಲ್ಲವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಆ.ಸ.ನೌ–1 ಮತ್ತು 2 ರವರುಗಳು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

20) ಕಾರಣ, ಶಿಸ್ತು ಪ್ರಾಧಿಕಾರದವರು ಆ.ಸ.ನೌ–1 ಮತ್ತು 2 ರವರುಗಳು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಆ.ಸ.ನೌ–1 ಮತ್ತು 2 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ಆ.ಸ.ನೌ.1 ಮತ್ತು 2 ರವರುಗಳು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ** (probabalities) ಕಂಡು ಬರುತ್ತದೆ. **ಈ ಎಲ್ಲಾ ಕಾರಣಗಳಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ* (1) ಶ್ರೀ **ಆರ್.ಎಸ್. ಗಲಗಲಿ,** ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್ ಬಾಗಲಕೋಟೆ ಮತ್ತು

ಆ.ಸ.ನೌ–(2) ಶ್ರೀ **ಆರ್.ಜಿ. ಗಡ್ಡದ,** ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್. ಬಾಗಲಕೋಟೆ ರವರುಗಳ ವಿರುದ್ಧ *ಹೊರಿಸಲಾದ ಆರೋಪವನ್ನು* ***ರುಜುವಾತುಪಡಿಸಲಾಗಿದೆ*** ಎಂದು *ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**30**ನೇ ಡಿಸೆಂಬರ್ 2019

30/12/19

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No. UPLOK-1/DE/472/2017/ARE-16

Multi Storied Building,
Dr. B.R. Ambedkar Veedhi,
Bengaluru-560 001
Date: **02/01/2020**

**RECOMMENDATION**

Sub:- Departmental inquiry against;
1) Sri R.S. Galagali, Assistant Executive Engineer, Karnataka Rural Infrastructure Development Limited, Bagalkot;
2) Sri R.G. Gaddad, Executive Engineer, Karnataka Rural Infrastructure Development Limited, Bagalkot – Reg.

Ref:- 1) Government Order No.ಗ್ರಾಅಪ 03 ಕಗ್ರಾಮೂ 2017 Bengaluru dated 10/2/2017
2) Nomination order No.UPLOK-1/DE/472/2017, Bengaluru dated 31/3/2017 of Upalokayukta-1, State of Karnataka, Bengaluru
3) Inquiry Report dated 30/12/2019 of Additional Registrar of Enquiries-16, Karnataka Lokayukta, Bengaluru

----

The Government by its Order dated 10/2/2017 initiated the disciplinary proceedings against (1) Sri R.S. Galagali, Assistant Executive Engineer, Karnataka Rural Infrastructure Development Limited, Bagalkot and (2) Sri R.G. Gaddad, Executive Engineer, Karnataka Rural Infrastructure Development Limited, Bagalkot (hereinafter referred to as Delinquent Government Officials 1 and 2, for short as DGO-1 and DGO-2 respectively) and entrusted the Departmental Inquiry to this Institution.

2. This Institution by Nomination Order No.UPLOK-1/DE/472/2017, Bengaluru dated 31/3/2017 nominated Additional Registrar of Enquiries-11, Karnataka Lokayukta, Bengaluru, as the Inquiry

Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them. Subsequently, by Order No. UPLOK-1&2/DE/Transfers/2019 dated 7/2/2019, the Additional Registrar of Enquiries-16, Karnataka Lokayukta, Bengaluru was re-nominated as inquiry officer to conduct departmental inquiry against DGOs 1 & 2.

3. The DGO-1 Sri R.S. Galagali, Assistant Executive Engineer, Karnataka Rural Infrastructure Development Limited, Bagalkot and DGO-2 Sri R.G. Gaddad, Executive Engineer, Karnataka Rural Infrastructure Development Limited, Bagalkot was tried for the following charge:-

> "ಒಂದನೆ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಎಸ್.ಗಲಗಲಿ ರವರು ಬಾಗಲಕೋಟೆಯ ಕೆ.ಆರ್.ಐ.ಡಿ.ಎಲ್ ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಮತ್ತು ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆರ್.ಜಿ. ಗಡ್ಡದರವರು ಬಾಗಲಕೋಟೆಯ ಕೆ.ಆರ್.ಐ.ಡಿ.ಎಲ್‌ನಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ 2014ನೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಬಾಗಲಕೋಟೆ ತಾಲ್ಲೂಕಿನ ಭಗವತಿ ಗ್ರಾಮದಲ್ಲಿ ಅನುಮೋದಿತ ಅಂದಾಜು ಪಟ್ಟಿಯಂತೆ ರೂ.57.22 ಲಕ್ಷಗಳ ಅನುದಾನದಲ್ಲಿ 35 ಕಾಮಗಾರಿಗಳು ಮಂಜೂರಾಗಿದ್ದು, ಸದರಿ 35 ಕಾಮಗಾರಿಗಳ ಪೈಕಿ 13 ಕಾಮಗಾರಿಯನ್ನು ನಿರ್ವಹಿಸದೇ, ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಮತ್ತು ಕಾಮಗಾರಿಗಳಿಗೆ ಮೀಸಲಿಟ್ಟ ಹಣವನ್ನು ಅನುಮೋದನೆ ಪಡೆಯದೆ ಬೇರೆ ಕಾಮಗಾರಿಗಳಿಗೆ ಬಳಸಿರುವುದು ಮತ್ತು ಬದಲಿ ಕಾಮಗಾರಿ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆಯದೆ ಸದರಿ ಯೋಜನೆಗಳ ನಿಯಮಗಳನ್ನು ಉಲ್ಲಂಘಿಸಿರುವುದರ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ."

4. The Inquiry Officer (Additional Registrar of Enquiries-16) on proper appreciation of oral and documentary evidence has held

that the Disciplinary Authority has proved the above charge against DGO-1 Sri R.S. Galagali, Assistant Executive Engineer, Karnataka Rural Infrastructure Development Limited, Bagalkot and DGO-2 Sri R.G. Gaddad, Executive Engineer, Karnataka Rural Infrastructure Development Limited, Bagalkot.

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGOs 1 & 2;

(i) DGO-1 Sri R.S. Galagali is due to retire from service on 31/5/2023;

(ii) DGO-2 Sri R.G. Gaddad has retired from service on 31/12/2019 (during the pendency of inquiry)

7. Having regard to the nature of charge proved against DGO-1 Sri R.S.Galagali and DGO-2 Sri R.G.Gaddad,

(i) it is hereby recommended to the Government for imposing penalty of reducing the pay in the time scale of pay by four lower stages, with cumulative effect on DGO-1 Sri R.S. Galagali, Assistant Executive Engineer, Karnataka Rural Infrastructure Development Limited, Bagalkot and also for deferring the promotion of DGO by three years, whenever he become due for promotion.

(ii) it is hereby recommended to Government for imposing penalty of withholding 10% of pension payable to DGO-2 Sri R.G. Gaddad, Executive Engineer, Karnataka Rural

Infrastructure Development Limited, Bagalkot for a period of 10 years.

8. Action taken in the matter shall be intimated to this Authority.

Connected records are enclosed herewith.

**(JUSTICE N. ANANDA)**
Upalokayukta-1,
State of Karnataka,
Bengaluru